# ಸಂಪಾದಕೀಯ

ಶಿಕ್ಷಣ ಮನುಷ್ಯನನ್ನು ವಿಚಾರವಂತನನ್ನಾಗಿ ಮಾಡುವಲ್ಲಿ ಪ್ರಜ್ಞಾವಂತನನ್ನಾಗಿ ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಾ ಬಂದಿದೆ. ಪ್ರಾಚೀನ ಸಂದರ್ಭದ ಗುರುಕುಲ ಶಿಕ್ಷಣದಿಂದ ಹಿಡಿದು ಆಧುನಿಕ ತಂತ್ರಜ್ಞಾನ ಆಧಾರಿತ ಶಿಕ್ಷಣದವರೆಗೆ ಶಿಕ್ಷಣದ ಕ್ಷೇತ್ರದಲ್ಲಿ ಕಾಲಕ್ಕನುಗುಣವಾಗಿ ಬದಲಾವಣೆಯಾಗುತ್ತಲೇ ಬಂದಿದೆ.

ಆಧುನಿಕ ಶಿಕ್ಷಣ ಪದ್ಧತಿಯ ಇಂದಿನ ಕಾಲ ಘಟ್ಟದಲ್ಲಿ ಶೈಕ್ಷಣಿಕ ಪಠ್ಯಕ್ರಮದಲ್ಲಿ, ಬೋಧನಾ ವೈಧಾನಿಕತೆಯಲ್ಲಿ ಅನೇಕ ಬದಲಾವಣೆಗಳು ಆಗುತ್ತಿದ್ದು, ೨೦೨೦ರ ರಾಷ್ಟ್ರೀಯ ಶಿಕ್ಷಣ ನೀತಿಯು ಈ ನಿಟ್ಟಿನಲ್ಲಿ ಬಹುಮುಖ್ಯ ಪ್ರಭಾವ ಬೀರಿದೆ. ಅಂತರ್ ಶಿಸ್ತೀಯ ಅಧ್ಯಯನ ವೈಧಾನಿಕತೆಯೆಡೆಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಪ್ರಸ್ತುತ ಸಂದರ್ಭದ ಅಧ್ಯಯನ, ಸಂಶೋಧನೆಗಳು ಈ ನಿಟ್ಟಿನಲ್ಲಿ ಜರುಗಬೇಕಾದ ಅಗತ್ಯವನ್ನು ಪ್ರತಿಪಾದಿಸಲಾಗಿದೆ.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ೨೦೨೦ ಜುಲೈ ೨೯ರಂದು ಕೇಂದ್ರ ಸಚಿವ ಸಂಪುಟದ ಅನುಮೋದನೆಯೊಂದಿಗೆ ಜಾರಿಗೆ ಬಂದಿತು. ಈ ಶಿಕ್ಷಣ ನೀತಿಯು ವಿಮರ್ಶಾತ್ಮಕ ಪ್ರಜ್ಞೆ ಮತ್ತು ಆಲೋಚನೆ, ತಾರ್ಕಿಕ ಮನೋವೃತ್ತಿಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಮಹತ್ವದ ದೃಷ್ಟಿಕೋನವನ್ನು ಹೊಂದಿದೆ. ಕಲಿಕಾ ವಿಧಾನವು ಹೆಚ್ಚು ಮುಕ್ತವಾಗಿಯೂ, ವೈಜ್ಞಾನಿಕವಾಗಿಯೂ ಇರಬೇಕೆಂಬ ನಿಲುವು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕಂಡು ಬರುತ್ತದೆ.

ಮಾತೃಭಾಷೆ ಕಲಿಕಾ ಪ್ರಕ್ರಿಯೆಯಲ್ಲಿ ಯಾವತ್ತಿಗೂ ಪ್ರಮುಖ ಪತ್ರ ವಹಿಸುತ್ತದೆ. ಆಡುನುಡಿಯಲ್ಲಿ ಕಲಿಯುವ ವಿಚಾರಗಳನ್ನು ವಿದ್ಯಾರ್ಥಿಗಳಲ್ಲಿ ವಿಷಯದ ಗ್ರಹಿಕೆ ಹೆಚ್ಚು ಶೀಘ್ರವಾಗಿ ಸಾಧ್ಯವಾಗುತ್ತದೆ ಎಂಬುದು ಅನೇಕ ಸಂದರ್ಭಗಳಲ್ಲಿ ಕಂಡು ಬರುತ್ತದೆ.

ಸಾಮಾನ್ಯವಾಗಿ ಇಂದು ವೃತ್ತಿಪರ ಶಿಕ್ಷಣ ವ್ಯವಸ್ಥೆಯ ಆಂಗ್ಲಭಾಷೆಯ ಮೂಲಕವೇ ನಡೆಯುತ್ತಿರುವುದು ನಮಗೆ ತಿಳಿದಿರುವ ಸಂಗತಿ. ಮಾತೃ ಭಾಷೆಯ ಮೂಲಕವೂ ಇದು ಸಾಧ್ಯವಾಗಬೇಕೆಂಬುದು ನೂತನ ಶಿಕ್ಷಣ ನೀತಿಯ ಆಶಯವಾಗಿದೆ.

ಮಾತೃ ಭಾಷೆಯ ಮೂಲಕವೂ ಇಂದು ಉನ್ನತ ಶಿಕ್ಷಣ ಸಾಧ್ಯವಾಗಬೇಕೆಂಬ ನಿಟ್ಟಿನಲ್ಲಿ ನಿರಂತರ ಪ್ರಯತ್ನಗಳು ಸಾಗಿವೆ. ಈ ನಿಟ್ಟಿನಲ್ಲಿ ಆಂಗ್ಲ ಭಾಷೆಯಿಂದ ಜ್ಞಾನದ ಪಠ್ಯವನ್ನು ವಿವಿಧ ಭಾರತೀಯ ಭಾಷೆಗಳಿಗೆ ಅನುವಾದಿಸುವ ಪ್ರಯತ್ನವೂ ಒಂದು. ಈ ನಿಟ್ಟಿನಲ್ಲಿ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ಅಂಗವಾದ ರಾಷ್ಟ್ರೀಯ ಅನುವಾದ ಮಿಷನ್ ಕೂಡ ಒಂದು. ದೇಶದ ವಿವಿಧ ಭಾಗಗಳ ಬಹುಭಾಷಾ ತಜ್ಞರು ಹಾಗೂ ಅನುವಾದಕರ ಮೂಲಕ ಅನೇಕ ಮಹತ್ವದ ವಿಚಾರಗಳನ್ನು ಪ್ರಾದೇಶಿಕ ಭಾಷೆಯಲ್ಲಿ ಲಭ್ಯವಾಗಿಸುವ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನ ಮಾಡುತ್ತಿದೆ.

ಇಂಜಿನಿಯರಿಂಗ್ ಕ್ಷೇತ್ರದಲ್ಲಿಯೂ ಸಹ ಸ್ಥಾನಿಕ ಭಾಷೆಯಲ್ಲಿ ಶಿಕ್ಷಣ ಸಾಧ್ಯವಾಗಬೇಕೆಂಬ ನಿಟ್ಟಿನಲ್ಲಿ ಕನ್ನಡದಲ್ಲಿ ಆ ನಿಟ್ಟಿನಲ್ಲಿ ವೈಜ್ಞಾನಿಕ ಪದಕೋಶಗಳ ನಿರ್ಮಾಣ, ಪಠ್ಯ ಕ್ರಮಗಳ ರೂಪಿಸುವಿಕೆಯ ಪ್ರಯತ್ನಗಳು ವಿವಿಧ ಸಂಸ್ಥೆಗಳ ಅಡಿಯಲ್ಲಿ ನಿರಂತರವಾಗಿ ನಡೆದಿವೆ. ಕರ್ನಾಟಕದಲ್ಲಿ ಕನ್ನಡ ಭಾಷಾ ಮಾಧ್ಯಮದ ಮೂಲಕ ಇಂಜಿನಿಯರಿಂಗ್ ತರಗತಿಗಳ ಬೋಧನೆಗೆ ಪ್ರಾತಿನಿಧಿಕವಾಗಿ ಕೆಲ ಮಹಾವಿದ್ಯಾಲಯಗಳಿಗೆ ಸರ್ಕಾರವು ಅನುಮತಿ ನೀಡಿದೆ.

ವಿದ್ಯಾರ್ಥಿಗಳು ಪಡೆಯುವ ಶಿಕ್ಷಣ ಅವರಲ್ಲಿ ಜ್ಞಾನವನ್ನು ಬಿತ್ತುವುದರ ಜೊತೆಗೆ ವೃತ್ತಿಪರತೆಯನ್ನು ಬೆಳೆಸಬೇಕೆಂಬ ಆಶಯವನ್ನು ನೂತನ ಶಿಕ್ಷಣ ನೀತಿಯು ಹೊಂದಿದೆ. ಇದಕ್ಕೆ ಭಾರತೀಯ ಭಾಷೆಗಳ ಮಾಧ್ಯಮವು ಪ್ರೇರಣೆಯಾಗಬಲ್ಲದು ಎಂಬ ನೆಲೆಯೂ ಸಹ ಇದರ ಹಿಂದಿದೆ. ಈ ಹಿನ್ನೆಲೆಯಲ್ಲಿ ವೃತ್ತಿಪರ ಹಾಗೂ ಕೌಶಲ್ಯಾಧಾರಿತ ಶಿಕ್ಷಣ ವ್ಯವಸ್ಥೆಯಲ್ಲಿ ಭಾರತೀಯ ಭಾಷೆಗಳ ಮಹತ್ವವನ್ನು ಚರ್ಚೆಗೊಳಪಡಿಸುವ ನಿಟ್ಟಿನಲ್ಲಿ "ಭಾರತೀಯ ಭಾಷಾ ಮಾಧ್ಯಮದ ಮೂಲಕ ವೃತ್ತಿಪರ ಹಾಗೂ ಕೌಶಲ್ಯಾಧಾರಿತ ಶಿಕ್ಷಣ" : ಸವಾಲುಗಳು ಮತ್ತು ಅವಕಾಶಗಳು: ಎಂಬ ವಿಷಯದ ಕುರಿತು ಬೆಂಗಳೂರಿನ

ನಮ್ಮ ಅಲಯನ್ಸ್ ವಿಶ್ವವಿದ್ಯಾಲಯದ ಉದಾರ ಕಲೆಗಳ ನಿಕಾಯದ ಭಾಷೆ ಹಾಗೂ ಸಾಹಿತ್ಯ ವಿಭಾಗವು ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ಸಹಭಾಗಿತ್ವದಲ್ಲಿ ಜೂನ್ ೨೯ ಹಾಗು ೩೦ ರಂದು ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿದ್ದು, ಕನ್ನಡ, ಹಿಂದಿ, ತಮಿಳು,ತೆಲುಗು, ಮಲಯಾಳಂ ಸೇರಿದಂತೆ ವಿವಿಧ ಭಾರತೀಯ ಭಾಷೆಗಳ ವಿದ್ವಾಂಸರು ಇದರಲ್ಲಿ ತಮ್ಮ ವಿದ್ವತ್ಪೂರ್ಣ ವಿಚಾರಗಳನ್ನು ಚರ್ಚಿಸಿದ್ದು, ಭಾರತೀಯ ಭಾಷಾ ಮಾಧ್ಯಮದ ಮೂಲಕ ವೃತ್ತಿಪರ ಹಾಗೂ ಕೌಶಲ್ಯಾಧಾರಿತ ಶಿಕ್ಷಣವನ್ನು ಸಾಕಾರಗೊಳಿಸುವ ದಿಶೆಯಲ್ಲಿ ಮಹತ್ವದ ದಿಕ್ಸೂಚಿಯಾಗಬಲ್ಲವು ಎಂಬುದು ನಮ್ಮೆಲ್ಲರ ಆಶಯವಾಗಿದೆ. ಅನುಕರ್ಷ ತ್ರೈಮಾಸಿಕ ಪತ್ರಿಕೆಯ ಪ್ರಸ್ತುತ ಸಂಚಿಕೆಯು ವಿಚಾರ ಸಂಕಿರಣದ ವಿಶೇಷ ಸಂಚಿಕೆಯಾಗಿ ಪ್ರಕಟವಾಗುತ್ತಿದೆ. ತಮ್ಮ ರಚನಾತ್ಮಕ ಸಲಹೆ-ಸೂಚನೆಗಳಿಗೆ ಸದಾ ಸ್ವಾಗತ.

ವಂದನೆಗಳೊಂದಿಗೆ ಡಾ. ವಿವೇಕಾನಂದ ಸಜ್ಜನ